INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -2, March--April, 2024,
PageNo,95- 100
Peer -Reviewed, Refereed Journal

# ಎಂ. ಶಾಮರಾವ್ ಬರವಣಿಗೆಗಳಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಪೂರ್ಣಯ್ಯನವರ ಕಂದಾಯ ಮತ್ತು ನ್ಯಾಯಾಡಳಿತ ವ್ಯವಸ್ಥೆ – ಒಂದು ಅವಲೋಕನ

ದಿನೇಶ ಎ. [1]

ಆಡಳಿತ ವ್ಯವಸ್ಥೆಯು ಅರ್ಥಮಾಡಿಕೊಳ್ಳಲು ಪ್ರಮುಖವಾಗಿ ಕಂದಾಯ ಮತ್ತು ನ್ಯಾಯ ವ್ಯವಸ್ಥೆ ಅಧ್ಯಯನ ಮಾಡಿದಾಗ ಹೈದರ್ ಅಲಿಯ ಕಾಲದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಕಂದಾಯ ವ್ಯವಹಾರಗಳನ್ನು ಅಮಲ್ದಾರ್ ನಿರ್ವಹಿಸುತ್ತಿದ್ದರು. ಟಿಪ್ಪು ಸುಲ್ತಾನ ಕಾಲದಲ್ಲಿ ಕಂದಾಯ ವ್ಯವಹಾರಗಳು ಅಸೋಫ್ ಮತ್ತು ಫೌಜ್‌ದಾರ್‌ಗಳು[1] ನೋಡಿಕೊಳ್ಳುತ್ತಿದ್ದರು. ದಿವಾನರು ಭೂಕಂದಾಯ ವ್ಯವಸ್ಥೆಯಲ್ಲಿ ಕಂದಾಯ ಇಲಾಖೆಯ ಆರಂಭ, ಕಂದಾಯ ಅಧಿಕಾರಿಗಳ ನೇಮಕ, ಭೂಕಂದಾಯವನ್ನು ನಿಗಧಿತವಾಗಿ ಸಂಗ್ರಹಿಸುವ ವ್ಯವಸ್ಥೆ ಮಾಡಿಕೊಂಡಿದ್ದರು ಪೂರ್ಣಯ್ಯ ವೈಯಕ್ತಿಕವಾಗಿ ಪ್ರತಿಯೊಂದು ಇಲಾಖೆಯ ಅಧ್ಯಕ್ಷತೆ ವಹಿಸುತ್ತಿದ್ದರು.[2]

ಹಣಕಾಸು ಇಲಾಖೆಯ ಕಾರ್ಯಚರಣೆಗಳು ಅತ್ಯಂತ ಸರಳವಾಗಿದ್ದವು ಪ್ರತಿ ತಾಲ್ಲೂಕಿಗೆ ಅದರ ಮುಖ್ಯ ಗೊಲ್ಲರು ಖಜಾನೆಯ ಕೀಲಿಯನ್ನು ಇಟ್ಟುಕೊಂಡಿದ್ದರು. ಶಿರಸ್ತೇದಾರ್ ಖಾತೆಗಳನ್ನು ಇಟ್ಟುಕೊಂಡಿದ್ದರು ಮತ್ತು ಅಮಲ್ದಾರ್ ಅವರ ಮುದ್ರೆಯನ್ನು ಅಂಟಿಸಿದರು. ಈ ಮೂರು ವ್ಯಕ್ತಿಗಳ ಉಪಸ್ಥಿತಿಯನ್ನು ಹೊರತುಪಡಿಸಿ ಸಾಮಾನ್ಯವಾಗಿ ಖಜಾನೆಯನ್ನು ತೆರೆಯಲಾಗುವುದಿಲ್ಲ[3] ಎಂದು ಶಾಮರಾವ್ ಉಲ್ಲೇಖಿಸಿದ್ದಾರೆ. ಸಾಮಾನ್ಯವಾಗಿ ಖಜಾನೆಯನ್ನು ಈ ಮೂವರು ಅಧಿಕಾರಿಗಳ ಸಮಕ್ಷಮದಲ್ಲಿ ತೆರೆಯಲಾಗುತ್ತಿತ್ತು.

ಷರ್ಫ್[4] ಎಂಬ ಮತ್ತೊಬ್ಬ ಅಧಿಕಾರಿಯು ಖಜಾನೆಯಿಂದ ಖಜಾನೆಯಲ್ಲಿದ್ದ ನಾಣ್ಯಗಳನ್ನು ಲೆಕ್ಕ ಮಾಡಿ ಚೀಲಗಳಿಗೆ ತುಂಬಿಸಿ ಅವುಗಳಿಗೆ ಮುದ್ರೆಯನ್ನು ಹಾಕಿ ಖಜಾನೆಗೆ ಕಳುಹಿಸುತ್ತಿದ್ದನು ನಾಣ್ಯಗಳ ಲೆಕ್ಕದಲ್ಲಿ ಏನೇ ವ್ಯತ್ಯಾಸವಾದರು ಷರ್ಫ್‌ನು ಜವಬ್ದಾರನಾಗುತ್ತಿದ್ದನು. ದಿವಾನರ ಮೊಹರು ಆದೇಶದಿಂದ ಮಂಜೂರಾದ ಇದೇ ರೀತಿಯ ಪ್ರತಿಕ್ರಿಯೆಯಿಂದ ಸಾಮಾನ್ಯ ಖಜಾನೆಯಲ್ಲಿ ನಗದು ವಿತರಣೆಗೆ ಹಾಜರಾಗಿತ್ತು. ಕಂದಾಯದಿಂದ ರಾಜ್ಯಕ್ಕೆ ಅನೇಕ ಮೂಲಗಳಿಂದ ಆದಾಯ ಬರುತ್ತಿತ್ತು. ಸರ್ಕಾರಕ್ಕೆ

1. ಸಂಶೋಧಕರು,ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ,

ಆದಾಯವು 4 ಮೂಲಗಳಿಂದ ಬರುತ್ತಿತ್ತು. ಸರ್ಕಾರದ ಈ ಆದಾಯವನ್ನು 4 ಮೂಲಗಳಿಂದ ಪಡೆಯಲಾಗಿತ್ತು[5] ಎಂಬುದನ್ನು ಇಲ್ಲಿ ಪರಿಶೀಲಿಸಬಹುದಾಗಿದೆ. ಅವುಗಳೆಂದರೆ,

ಎ) ಜಮೀನು ಬಾಡಿಗೆ ಬಿ) ಸಯಾರ್ ತೆರಿಗೆ

ಸಿ) ಟಾಡಿ[6] ಮತ್ತು ಮದ್ಯ ಪಾನೀಯಗಳು ಡಿ) ತಂಬಾಕು ಮೇಲಿನ ತೆರಿಗೆ ಎಂದು ಮೇಲಿನ ಮೂಲಗಳಿಂದ ಸರ್ಕಾರ ಆದಾಯ ಪಡೆಯುತ್ತಿದ್ದರೂ ಕೂಡಾ ವೆಚ್ಚವನ್ನು ಯಾವ ಮೂಲಗಳಿಗೆ ಖರ್ಚು ಮಾಡಲಾಗಿತ್ತು ಎಂಬುದನ್ನು ಶಾಮರಾವ್ ರವರು ಉಲ್ಲೇಖಿಸಿರುವರು ಅವುಗಳೆಂದರೆ

ಎ) ನಿರ್ವಹಣೆ ವೆಚ್ಚಗಳು

ಬಿ) ಸಹಾಯಧನ

ಸಿ) ಮಿಲಿಟರಿ ಶುಲ್ಕಗಳು

ಡಿ) ಅಸಾಧರಣ ವೆಚ್ಚಗಳೆಂದು ವಿಂಗಡಿಸಬಹುದು.

ಸರ್ಕಾರಕ್ಕೆ ಬಂದ 4 ಪ್ರಮುಖ ಆದಾಯ ಮೂಲಗಳಿಂದ ಮತ್ತು ಅವುಗಳನ್ನು ವೆಚ್ಚದ ರೂಪದಲ್ಲಿ ಹೇಗೆ ಖರ್ಚು ಮಾಡಲಾಗುತ್ತಿತ್ತು ಎಂಬುದನ್ನು ಮೇಲಿನವುಗಳಲ್ಲಿ ಗುರುತು ಮಾಡಿರುವ ಪ್ರಮುಖಾಂಶಗಳು ತಿಳಿಸುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ. ಆದಾಯದ ಸಂಗ್ರಹಣೆ ಮತ್ತು ಸುಭಾದಾರರ ಮಾರ್ಗದರ್ಶನದ ಅಡಿಯಲ್ಲಿ ಅಮಿಲ್‌ಗಳಿಗೆ ವಹಿಸಲಾಯಿತು. ಅವರು ಪ್ರಾದೇಶಿಕ ಶುಲ್ಕಗಳು, ಆಗಾಗ್ಗೆ ರಾಜ್ಯಾದ್ಯಂತ ಪ್ರಯಾಣಿಸಿ ಮೇಲ್ವಿಚಾರಣೆ ಮಾಡುತ್ತಿದ್ದರು.[7] ಎಂದು ಶಾಮರಾವ್ ವಿವರಿಸಿರುವರು ಪ್ರಾರಂಭದಲ್ಲಿ ವರ್ಷದ ಒಟ್ಟು ಆದಾಯ ಸಂಗ್ರಹದಿಂದ ವೆಚ್ಚಗಳಿಗೆ ಕಳೆದು ಕಡಿತಗೊಳಿಸಲ್ಪಟ್ಟ ಅಂದರೆ ಉಳಿದ ಆದಾಯವನ್ನು ನಿವ್ವಳ ಆದಾಯವೆಂದು ಪರಿಗಣಿಸಲಾಗಿದೆ.[8] ಸಾಮಾನ್ಯವಾಗಿ ನಿರ್ವಹಣೆಯನ್ನು ಹೊರತುಪಡಿಸಿ ಉಳಿದ 3 ವೆಚ್ಚಗಳಿಗೆ ಮಾಡಿದ್ದಾಗಿರುತ್ತದೆ. ಮೊದಲ ವರ್ಷದ 1799–1800 ರ ರಶೀದಿಗಳು ಮತ್ತು ಖರ್ಚುಗಳನ್ನು ತೆಗೆದುಕೊಂಡರೆ ವಿವಿಧ ವೆಚ್ಚದ ವಸ್ತುಗಳಿಗೆ ಖರ್ಚು ಮಾಡಿದ ಹಣ ಸ್ವರೂಪ ಮತ್ತು ಸರ್ಕಾರದ ಚಟುವಟಿಕೆಗಳ ಕ್ಷೇತ್ರವನ್ನು ಸೂಚಿಸುತ್ತದೆ. 1799 – 1800 ರ ಲೆಕ್ಕಚಾರದಂತೆ ಒಟ್ಟು ಆದಾಯವು 21, 53, 607 ಕಂಠೀರಾಯ ಪಗೋಡಸ್[9] ಎಂದು ಹೇಳಬಹುದಾಗಿದೆ. ಇಲ್ಲಿ ಒಂದು ಪಟ್ಟಿ ನೋಡುವುದಾದರೆ.

I. ನಿರ್ವಹಣೆ ವೆಚ್ಚ – 6,35,580 ಕಂಠೀರಾಯ ಪಗೋಡ

II. ನಿವ್ವಳ ಆದಾಯದಿಂದ

ಮಾಡಲ್ಪಟ್ಟ ವೆಚ್ಚಗಳ ವಿವರ – 15,18,027 ಕಂಠೀರಾಯ ಪಗೋಡ

ಎ) ಸಹಾಯಧನ – 8,42,592 ಕಂಠೀರಾಯ ಪಗೋಡ

ಬಿ) ಮಿಲಿಟರಿಶುಲ್ಕಗಳು – 5,16,552 ಕಂಠೀರಾಯ ಪಗೋಡ

ಸಿ) ಅಸಾಮಾನ್ಯ ವೆಚ್ಚ – 1,50,832 ಕಂಠೀರಾಯ ಪಗೋಡ

ಮೊದಲ ವರ್ಷದ ಖಜಾನೆಯಲ್ಲಿ ಉಳಿದಿರುವ ಬಾಕಿ 2,38,557 ಕಂಠೀರಾಯ ಪಗೋಡಗಳಾಗಿತ್ತು ಎಂಬುದನ್ನು ಮೇಲಿನ ಪಟ್ಟಿ ಸೂಚಿಸುತ್ತಿತ್ತು.

### ❖ ನ್ಯಾಯಾಡಳಿತ ವ್ಯವಸ್ಥೆ :–

ಕಂದಾಯ ಇಲಾಖೆಗಳಿರುವಂತೆ ನ್ಯಾಯದ ಆಡಳಿತದ ಬಗ್ಗೆಯೂ ವಿವರಿಸಲಾಗಿದೆ ನ್ಯಾಯದಾನ ಪದ್ಧತಿ ಆಡಳಿತದ ಅಂಗಗಳದಲ್ಲಿ ಅತ್ಯಂತ ಪ್ರಮುಖವಾದುದು. ಹಿಂದೂ ಕಾನೂನಿನ ಸಿದ್ಧಾಂತದಡಿಯಲ್ಲಿ ಗೌರವವನ್ನು ನೀಡಲಾಯಿತು.[10] ಎಂಬುದನ್ನು ಶಾಮರಾವ್ ರವರು ತಿಳಿಸಿದ್ದಾರೆ. ನ್ಯಾಯದ ಆಡಳಿತಕ್ಕೆ ಪ್ರತ್ಯೇಕ ಇಲಾಖೆಯು ಅಸ್ತಿತ್ವದಲ್ಲಿರಲಿಲ್ಲ ಮತ್ತು ಸರ್ಕಾರದ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಇಲಾಖೆಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಿದುದ್ದು ಕಂಡುಬರುತ್ತದೆ. ಸರ್ಕಾರದ ಕಾರ್ಯ ನಿರ್ವಹಿಸುವ ಅಧಿಕಾರಿಗಳೇ ನ್ಯಾಯವನ್ನು ಕೊಡುತ್ತಿದ್ದರು. ಎಂಬುದು ಗಮನಾರ್ಹವಾದ ವಿಚಾರವಾಗಿದೆ. ಅದಾಗ್ಯೂ ಕೆಲವೊಂದು ಧಾರ್ಮಿಕ ವಿಷಯಗಳಿಗೆ ಸಂಬಂಧಪಟ್ಟಿದ್ದು ಆಗಿದ್ದರೆ ಹಲವಾರು ಪ್ರಮುಖ ಪಟ್ಟಣಗಳಲ್ಲಿ ಮುಸ್ಲಿಂರಿಗೆ ಖಾಜಿಗಳು[11] ಹಾಗೂ ಹಿಂದೂಗಳಿಗೆ ಹಿರಿಯರೇ ನ್ಯಾಯ ತೀರ್ಮಾನವನ್ನು ಕೊಡುತ್ತಿದ್ದರು. ಸಾಮಾನ್ಯವಾಗಿ ಈ ರೀತಿಯ ನ್ಯಾಯ ತೀರ್ಮಾನಗಳು ಪೂರ್ವ ನಿದರ್ಶನಗಳ ಪ್ರಕಾರ ನಿರ್ಧರಿಸಲಾಗುತ್ತದೆ. ಅಂತಹ ಯಾವುದೇ ರೀತಿಯ ನಿದರ್ಶನಗಳು ಕಂಡು ಬಂದಿಲ್ಲ.

ಪ್ರತಿ ತಾಲ್ಲೂಕಿನಲ್ಲಿ ಅಮಿಲ್ ರವರು ವೈಯಕ್ತಿಕ ತಪ್ಪುಗಳಿಗಾಗಿ, ಮತ್ತು ದೂರು ನೀಡುವ ಎಲ್ಲಾ ಸಣ್ಣ–ಪುಟ್ಟ ಪ್ರಕರಣಗಳನ್ನು ತೀರ್ಮಾನ ಮಾಡುತ್ತಿದ್ದರು. ಆದರೆ ಸುಭಾದಾರರು ಮುಖ್ಯವಾದ ಕ್ರಿಮಿನಲ್ ಅಥವಾ ಸಿವಿಲ್ ಪ್ರಕರಣಗಳ ಮೊಕದ್ದಮೆಗಳಲ್ಲಿ ಅಮಲ್ದಾರನಿಗೆ ವರದಿ ಕಳುಹಿಸುತ್ತಿದ್ದರು ವ್ಯಾಜ್ಯವನ್ನು ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳಾಗಿ ವಿಂಗಡಿಸುವ ಕ್ರಮವನ್ನು ಜಾರಿಗೆ ತಂದಿದ್ದರು[12] ಎಂಬುದು ವಿಶೇಷತೆ. ಸಾಮಾನ್ಯವಾಗಿ ಕೊಲೆ, ಲೂಟಿ, ದರೋಡೆ ಇತ್ಯಾದಿಗಳ ಕ್ರಿಮಿನಲ್ ವ್ಯಾಜ್ಯದ ಗುಂಪಿನಲ್ಲಿ ಸೇರಿದರೆ ಆಸ್ತಿ, ವೈಯಕ್ತಿಕ ವಿಚಾರಗಳು, ಜೀವನ ಸಂಬಂಧಪಟ್ಟಂತೆ ಆದರೆ ಸಿವಿಲ್ ವ್ಯಾಜ್ಯಗಳಿಗೆ ಒಳಪಡುತ್ತಿತ್ತು. ಯಾವುದೇ ವ್ಯಕ್ತಿಯು ಗಂಭೀರವಾದ ಕ್ರಿಮಿನಲ್ ಕೇಸ್‌ನಲ್ಲಿ ಭಾಗಿಯಾಗಿದ್ದರೆ ಅಮಲ್ದಾರ್ ಅಥವಾ ಸುಭಾದಾರರು ಸಾರ್ವಜನಿಕವಾಗಿ ಅವನನ್ನು ವಿಚಾರಣೆಗೆ ಗುರಿಪಡಿಸಬೇಕೆಂದು ಭಾವಿಸಿದರೆ, ಪಂಚಾಯ್ತಿ ಸಭೆಯಲ್ಲಿ ಮತ್ತು 5 ಜನರ ಆಯೋಗವನ್ನು ಒಟ್ಟು ಗೂಡಿಸಲು ಆದೇಶಿಸಲಾಗಿತ್ತು. ಅದೇ ತಾಲ್ಲೂಕಿನ ಗಣ್ಯ ವ್ಯಕ್ತಿಗಳು, ಅಪಾದಿತನಿಗೆ ಸಂಬಂಧ ಪಡದಿದ್ದವರು ಪಂಚಾಯ್ತಿಯಲ್ಲಿ

ಕುಳಿತುಕೊಳ್ಳಬಹುದು ಎಂದು ಶಾಮರಾವ್ ವ್ಯಕ್ತಪಡಿಸಿದ್ದಾರೆ. ನ್ಯಾಯಯುತವಾಗಿ ವಿಚಾರಣೆ ನಡೆಸಿದ ನಂತರ ಅಮಲ್ದಾರ ಅಥವಾ ಸುಭೇದಾರನು ತನ್ನ ವಿಶೇಷ ವರದಿಯೊಂದಿಗೆ ಸಂಬಂಧಪಟ್ಟ ಸಂಪೂರ್ಣ ವರದಿಯನ್ನು ದಿವಾನರ ಅವಗಾಹನೆಗೆ ಕಳುಹಿಸಬೇಕಾಗಿತ್ತು. ವರದಿಯ ಆಧಾರದ ಮೇಲೆ ದಿವಾನರೇ ತೀರ್ಪನ್ನು ಕೊಡುತ್ತಿದ್ದರು. ಕಳ್ಳತನ ಮತ್ತು ದರೋಡೆಗೆ ಅಪರಾಧಗಳ ಸ್ವರೂಪಕ್ಕೆ ಅನುಗುಣವಾಗಿ ಅವಧಿಗೆ ಸಂಬಂಧಪಟ್ಟಂತೆ ಜೈಲು ಶಿಕ್ಷೆ ವಿಧಿಸಲಾಯಿತು ಗಡಿಯಲ್ಲಿ ಕೊಲೆಯಂತಹ ಪ್ರಕರಣಗಳಲ್ಲಿ ಕಂಡುಬಂದರೆ ಮಾತ್ರ ಮರಣದಂಡನೆ ವಿಧಿಸಲಾಯಿತು.[13] ಎಂಬುದನ್ನು ಇಲ್ಲಿ ವಿಶೇಷವಾಗಿ ನೋಡಬಹುದಾಗಿದೆ.

ಸಿವಿಲ್ ನ್ಯಾಯದ ಆಡಳಿತವನ್ನು ಅಪರಾಧಿಯಂತೆಯೇ ನಡೆಸಲಾಯಿತು. 5 ಪಗೋಡಗಳ ಮೌಲ್ಯವನ್ನು ಮೀರಿದ ವಿವಾದಿತ ಆಸ್ತಿಯ ಎಲ್ಲಾ ಪ್ರಕರಣಗಳನ್ನು ತೆರೆದ ಕಛೇರಿಯಲ್ಲಿ ಕೇಳುವ ಮತ್ತು ನಿರ್ಧರಿಸುವ ಅಧಿಕಾರವನ್ನು ಅಮಿಲ್‌ಗೆ ವಹಿಸಲಾಯಿತು. ಯಾವುದೇ ನ್ಯಾಯದ ದೋಷದಿಂದ ರಕ್ಷಿಸಲು ಗಣ್ಯವ್ಯಕ್ತಿಗಳು, ಬಿಡುವಿನ ಸಮಯಕ್ಕೆ ಅವರ ಅನುಕೂಲಕ್ಕೆ ಅನುಗುಣವಾಗಿ ಮೌಲ್ಯ ಮಾಪಕರಾಗಿ ಹಾಜರಾಗಲು ಪ್ರೋತ್ಸಾಹಿಸಲಾಯಿತು.

ಅಧಿಕಾರದ ದುರುಪಯೋಗ ಅಥವಾ ರಾಜ್ಯದ ಸೇವೆಯಲ್ಲಿನ ಇತರ ಕರ್ತವ್ಯ ಲೋಪಗಳ ಸಂದರ್ಭದಲ್ಲಿ ಅಮಿಲ್ದಾರ್ ಅಥವಾ ಯಾವುದೇ ಇತರೇ ಅಧಿಕಾರಿಯಾಗಲಿ ಅಧಿಕಾರವನ್ನು ದುರುಪಯೋಗವನ್ನು ಮಾಡಿಸಿಕೊಂಡು ಕರ್ತವ್ಯ ಲೋಪ ಎಸಗಿದರೆ ಅಂತಹ ಅಧಿಕಾರಿಗಳನ್ನು ಅವರ ಹುದ್ದೆಯಿಂದ ವಜಾಗೊಳಿಸುವುದು ಪೂರ್ಣಯ್ಯ ಅವರೊಂದಿಗಿನ ಬದಲಾಗದ ನಿಯಮವಾಗಿತ್ತು. ಮತ್ತು ಅವನೆಂದೂ ಸರ್ಕಾರಿ ಹುದ್ದೆಗೆ ಸೇರುವಂತಿರಲಿಲ್ಲ. ಆರಂಭಿಕ ವರ್ಷಗಳನ್ನು ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಪೂರ್ಣಯ್ಯ ಅವರಿಗೆ ಸಾಕಷ್ಟು ಮುಜುಗರವನ್ನು ಉಂಟುಮಾಡಿತು. ಎಂದು ಹೇಳಲಾಗುತ್ತದೆ. ಆದರೆ ನಂತರ ದಿವಾನರು ಈ ವಿಷಯದಲ್ಲಿ ಮಣಿಯುವುದಿಲ್ಲ ಎಂದು ತಿಳಿದಾಗ ಸಾರ್ವಜನಿಕ ಸೇವೆಯ ಶುದ್ಧತೆ ಕ್ರಮೇಣ ಸುಧಾರಿಸಿತು. ಕ್ರಮೇಣ ಪ್ರಜೆಗಳ ಕಲ್ಯಾಣವನ್ನು ಉಂಟುಮಾಡುವುದರಲ್ಲಿ ಸಹಕಾರಿಯಾಯಿತು.

1805 – 06 ರ ಸಮಯದಲ್ಲಿ ಮೈಸೂರು ಸಂಸ್ಥಾನದಲ್ಲಿ ದಿವಾನರಾದ ಪೂರ್ಣಯ್ಯರವರು ಮಹತ್ತರವಾದ ಸುಧಾರಣೆಯೊಂದನ್ನು ತರುವುದರ ಮೂಲಕ ನ್ಯಾಯ ಪ್ರಕ್ರಿಯೆಗೆ ಹೊಸ ತಿರುವು ನೀಡಿದರು. ಅದೇನೆಂದರೆ ಮೈಸೂರಿನಲ್ಲಿ ಒಂದು ಅದಾಲತ್ ನ್ಯಾಯಾಲಯವನ್ನು ಸ್ಥಾಪಿಸಿದ್ದು. ಈ ನ್ಯಾಯಾಲಯದಲ್ಲಿ ಇಬ್ಬರು ನ್ಯಾಯಾಧೀಶರು, ಇಬ್ಬರು ಶಿರಸ್ತೇದಾರರು 6 ಮಂದಿ ಗೌರವಾನ್ವಿತ ಗಣ್ಯ ವ್ಯಕ್ತಿಗಳನ್ನು ಒಳಗೊಂಡ ನ್ಯಾಯಾಲಯವನ್ನು ಸ್ಥಾಪಿಸಿದರು ನ್ಯಾಯದ ನಿಯಮಿತ ಆಡಳಿತದಲ್ಲಿ ಅವರಿಗೆ ಸಹಾಯ ಮಾಡಲು ಒಬ್ಬ ಖಾಜಿ ಮತ್ತು ಒಬ್ಬ ಪಂಡಿತನನ್ನು ಒಳಗೊಂಡ ಪಂಚಾಯ್ತಿ

ಸ್ಥಾಪಿಸಿಕೊಂಡರು. ಇಬ್ಬರು ನ್ಯಾಯಾಧೀಶರುಗಳಲ್ಲಿ ಒಬ್ಬರು ಬ್ರಾಹ್ಮಣ ಸಮುದಾಯಕ್ಕೆ ಸೇರಿದ ವ್ಯಾಸರಾವ್ ರವರು ಮತ್ತು ಮಹಮ್ಮದೀಯ ಪಂಗಡಕ್ಕೆ ಒಳಪಟ್ಟ ಅಹಮ್ಮದ್‌ಖಾನ್ ಎಂಬ ಮತ್ತೊಬ್ಬರಾಗಿದ್ದರು.[14]

ಹೀಗೆ ಎಂ. ಶಾಮರಾವ್ ಬರವಣಿಗೆಗಳಲ್ಲಿ ದಿವಾನ್ ಪೂರ್ಣಯ್ಯನ ಕಾಲದ ಕಂದಾಯ, ಹಣಕಾಸು ಮತ್ತು ನ್ಯಾಯಾಡಳಿತ ವ್ಯವಸ್ಥೆ ಬಗ್ಗೆ ಸಂಕ್ಷಿಪ್ತವಾಗಿ ಅವಲೋಕಿಸಲಾಗಿದೆ. ಸೈನ್ಯಕ್ಕೆ, ಕಂದಾಚಾರ ಮುಂತಾದ ಆಡಳಿತಕ್ಕೂ ಹೆಚ್ಚಿನ ಮಹತ್ವವನ್ನು ಪೂರ್ಣಯ್ಯನು ಕೊಟ್ಟಿದ್ದರು ಎನ್ನಬಹುದಾಗಿದೆ.

ಮೇಲೆ ವಿವರಿಸಲಾಗಿರುವ ಕಂದಾಯದ ಬಗ್ಗೆ ಆದಾಯ ಮತ್ತು ವೆಚ್ಚದ ಬಗ್ಗೆ ಒಂದು ಪಕ್ಷಿನೋಟವನ್ನು ಮಾತ್ರ ನೋಡಲಾಗಿಯೂ, ಇನ್ನೂ ಅನೇಕ ವಿಷಯಗಳಿವೆ. ದಿವಾನನ ಪೂರ್ಣಯ್ಯನ ಕೈಗೊಂಡ ಕ್ರಮಗಳ ಬಗ್ಗೆಯು ಮಹತ್ತರವಾಗಿಯೂ ಎಂ.ಶಾಮರಾವ್ ಕಟ್ಟಿಕೊಟ್ಟಿದ್ದಾರೆ ಅಂಕಿ–ಅಂಶಗಳ ಸಮೇತ ಪೂರ್ಣಯ್ಯನ ಆಡಳಿತ ಬಗ್ಗೆ ನಂಬಲರ್ಹವಾದ ಮಾಹಿತಿಯನ್ನು ಒದಗಿಸಿದ್ದಾರೆ.

ನ್ಯಾಯಾಡಳಿತವು ಮುಖ್ಯವಾಗಿ ಪ್ರಮುಖ ಅಂಗವಾಗಿದ್ದು ದಿವಾನರ ಕಾಲದಲ್ಲಿ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುತ್ತಿತ್ತು. ಶಿಸ್ತುಕ್ರಮ, ಬದ್ಧತೆ, ಕಠಿಣತೆ ಇಲ್ಲಿ ಕಾಣಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬ್ರಿಟಿಷ್ ವಸಾಹತುಶಾಹಿ ವ್ಯವಸ್ಥೆ ತನ್ನ ಯಜಮಾನಿಕೆಗೆ ಮಾನ್ಯತೆ ತಂದುಕೊಳ್ಳಲು ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೊಳಿಸಲು. ಪೂರ್ಣಯ್ಯನವರ ಕಾಲದಲ್ಲಿ ಈ ಪ್ರಯೋಗ ಮೈಸೂರನ್ನು ಪ್ರವೇಶಿಸಿತು ಮತ್ತು ಮಧ್ಯಕಾಲೀನ ಭಾರತದಲ್ಲಿ ಜಾರಿಗೊಂಡ ಕಾನೂನಿನ ವ್ಯವಸ್ಥೆ ಈ ವ್ಯವಸ್ಥೆಯ ಜೊತೆಗೆ ಸಾಗಿದ್ದು ನ್ಯಾಯ ವ್ಯವಸ್ಥೆಯಾದ ಇತಿಹಾಸದ ನಿಜವಾದ ವಿಶೇಷತೆ ಎನ್ನಬಹುದಾಗಿದೆ.

**ಅಡಿ ಟಿಪ್ಪಣಿ**

1. ಫೌಜ್‌ಧಾರ್‌ಗಳು ಪ್ರಾರಂಭದಲ್ಲಿ ಸೈನಿಕ ಅಧಿಕಾರಿಗಳಾಗಿದ್ದು ಆನಂತರದಲ್ಲಿ ಕಂದಾಯ ಸಂಗ್ರಹಿಸುವ ಅಧಿಕಾರಿಗಳಾಗಿದ್ದರು.
2. ಎಂ.ಶಾಮರಾವ್,ಮಾಡ್ರನ್,ಮೈಸೂರು ಸಂಪುಟ–1,ಬೆಂಗಳೂರು.1936,ಪು.337.
3. ಅದೇ ಪುಟ.337
4. ಷರ್ಫ್ – ದಿವಾನನ ಕಾಲದಲ್ಲಿ ಇದ್ದ ಖಜಾನೆ ಅಧಿಕಾರಿ.
5. ಎಂ. ಶಾಮರಾವ್ ಪೂರ್ವೋಕ್ತ ಪುಟ.337, 338.
6. ಟಾಡಿ ಎಂದರೆ ಹೆಂಡದ ಮೇಲೆ ವಿಧಿಸುತ್ತಿದ್ದ ಸುಂಕ.

7. ಎಂ.ಶಾಮರಾವ್,ಮಾಡ್ರನ್ ಮೈಸೂರು,ಸಂಪುಟ.1ಬೆಂಗಳೂರು,1936,ಪುಟ.337.

8. ಎಂ. ಶಾಮರಾವ್, ಪೂರ್ವೋಕ್ತ ಪುಟ 367.

9. ಒಂದು ಕಂಠೀರಾಯ ಪಗೋಡ ಮೂರು ರೂಪಾಯಿ,50ಪೈಸೆಗೆ ಸಮಾನವಾದುದು.

10. ಎಂ. ಶಾಮರಾವ್, ಪೂರ್ವೋಕ್ತ ಪುಟ.339.

11. ಖಾಜಿಗಳು ಸಾಮಾನ್ಯವಾಗಿ ಮುಸ್ಲಿಂರಿಗೆ ನ್ಯಾಯ ತೀರ್ಮಾನ ಕೊಡುತ್ತಿದ್ದರು.

12. ವಿಕ್ರಂ ಸಂಪತ್, ಸ್ಪ್ಲೆಂಡರ್ಸ್ ಆಫ್ ರಾಯಲ್ ಮೈಸೂರು, ರೂಪ ಪಬ್ಲಿಕೇಷನ್ ಪ್ರವೈಟ್ ಲಿ. 2008 ಪುಟ.408.

13. ಎಂ. ಶಾಮರಾವ್, ಪೂರ್ವೋಕ್ತ ಪುಟ.339.

14. ಎಂ. ಶಾಮರಾವ್, ಪೂರ್ವೋಕ್ತ ಪುಟ.341.